ಹಾದರ...' ನನ್ನೊಳಗಿನ ಬೃಂದಾವನದೊಳಗೆ ಕೆಸರು ರಾಚಿಬಿಟ್ಟಿತು. ನನ್ನ ಅಳು ನಿಂತದ್ದು ನೋಡಿ ಅವನಿಗೇನನ್ನಿಸಿತೋ... ನಾನು ಎದುರು ನಿಲ್ಲುತ್ತಿದ್ದೇನೆ ಅಂದುಕೊಂಡನೇನೋ... ಮರುಕ್ಷಣ ನನ್ನ ಕೆನ್ನೆಗೆ ರಪ್ಪೆಂದು ಬಿತ್ತು... ಕಾಲಿನಲ್ಲಿ ಝಾಡಿಸಿ ಒದ್ದ. ಅಷ್ಟೆ... ಕೆಳಗೆ ಬಿದ್ದೆ. ಹೊಟ್ಟೆಯಲ್ಲಿದ್ದ ಕೂಸನ್ನು ಕೈಯಲ್ಲಿ ತಡವಿ ಹಿಡಿದೆ. ಅವನನ್ನು ಒಂದೇ ಒಂದು ಸಲ ನನ್ನ ದೊಡ್ಡ ದೊಡ್ಡ ಕಣ್ಣುಗಳನ್ನು ಅರಳಿಸಿ ನೋಡಿದ್ದು ಮಾತ್ರ. ನಂತರ ಮುಖ ತಿರುವಿ ಕೋಣೆಯಿಂದ ಹೊರಗೆ ಹೋದೆ. ಪಡಸಾಲೆಯಲ್ಲಿ ಮೈದುನರು, ನಾದಿನಿಯರೆಲ್ಲ ನಿಂತುಬಿಟ್ಟಿದ್ದರು. ನಾನು ಮನೆಯ ಹೊರಗೆ ಹೋಗಿ ಹಜಾರದ ಕಂಬದ ಬಳಿ ಸುಮ್ಮನೆ ಕುಳಿತೆ. ಯಾರೊಂದಿಗೂ ಮಾತಾಡಲಿಲ್ಲ. ಏನಾಗಿತ್ತು ನನಗೆ ತಿಳಿಯದು. ಮರುದಿನ ಬೆಳಿಗ್ಗೆ ನಾನು ಮನೆಯಲ್ಲಿ ಇರಲಿಲ್ಲ. ಎಲ್ಲರೂ ಹುಡುಕಿದರೋ, ಬಿಟ್ಟರೋ... ತಿಳಿಯದು. ಅಮ್ಮನ ಮನೆಗೆ ಹೋಗುವ ಮನಸ್ಸಾಗಲಿಲ್ಲ. ನನಗೆ ಗೊತ್ತು ಅಲ್ಲಿ ಅಮ್ಮ ಹೇಳುತ್ತಿದ್ದ ಮಾತು ಅಷ್ಟೆ... 'ಈ ಗಂಡಸರೇ ಹೀಗೆ ವಾಸಂತಿ. ನಾವೆ ಹೊಂದಿಕೋಬೇಕು. ಒಂದೆರಡು ದಿನ ಸುಧಾರಿಸಿಕೊ. ಅವನು ಬರುತ್ತಾನೆ. ಅವನ ಜೊತೆಯಲ್ಲಿ ಹೋಗು...' ಅಂತ.

ಏನೋ ತಿಳಿಯದು. ನಡೆಯುತ್ತಲೇ ದಾರಿ ಸವೆದಿತ್ತು. ಆಗ ಸಿಕ್ಕವಳೇ ಪಂಕಜ. ಪಕ್ಕದ ಊರಿನವಳು. ಅಡುಗೆ ಕೆಲಸ ಮಾಡುತ್ತಿದ್ದವಳು. ಅವಳ ಜೊತೆಯಲ್ಲಿ ಅವರ ಅಡುಗೆ ಗುಂಪಿನಲ್ಲಿ ಸೇರಿಬಿಟ್ಟೆ. ಬ್ರಾಹ್ಮಣರ ಈ ಗುಂಪಿನ ಅಡುಗೆಗೆ ಬಹಳ ಡಿಮ್ಯಾಂಡ್ ಇತ್ತು. ನನಗೂ ಕೆಲಸಗಳೆಲ್ಲ ಗೊತ್ತಿದ್ದರಿಂದ ನಿಧಾನವಾಗಿ ತೊಡಗಿಸಿಕೊಂಡೆ. ನನಗೆ ಮಗಳು ಹುಟ್ಟಿದಳು. ಹೌದು. ಆದರೆ ಬೃಂದಾವನದ ಹಾಲು ಮಾತ್ರ ಚೆಲ್ಲಿಹೋಗಿತ್ತು. ಅವನಿಗೆ ವಿಷಯ ಯಾರಿಂದಲೋ ತಿಳಿಯಿತಂತೆ. ಹೆಣ್ಣುಮಗು ಎಂದು ನೋಡಲು ಬರಲಿಲ್ಲ. ಕರೆದೊಯ್ಯಲೂ ಬರಲಿಲ್ಲ. ಅವನ ಕೋಪವನ್ನು ಎರಡೆರಡು ವರ್ಷ ಕಾಪಾಡಿಕೊಂಡಿದ್ದ. ಗಂಡಿನ ಅಹಮ್ಮಿಗೆ ಇಷ್ಟೂ ಇಲ್ಲದಿದ್ದರೆ ಹೇಗೆ! ಆ ವೇಳೆಗೆ ನಮ್ಮ ಸುಮತಿಗೂ ಯಾವ ವರವೂ ಕೂಡಿ ಬರಲಿಲ್ಲ. ಜನರೆಲ್ಲ... ನಿಮ್ಮ ಮಗಳಿಂದ ಅವನ ವಂಶಬೆಳೆಯುತ್ತಿಲ್ಲ, ಮಗಳೆ ಹೊರಟು ಹೋಗಿದ್ದಾಳೆ ಅಂತೆಲ್ಲ ಮಾತನಾಡತೊಡಗಿದ್ದರು. ನಾನು ಮತ್ತೆ ನನ್ನ ಬಳಿಯೇ ಬರುತ್ತಾರೆ ಅಂತ ಊರಿಂದಲೇ ಬೇರೊಂದು ಅಡುಗೆ ಗುಂಪಿಗೆ ಸೇರಿಕೊಂಡು ಬಿಟ್ಟೆ. ನಾನೆಲ್ಲಿದ್ದೇನೆ ಎಂಬ ಸುಳಿವು ಕೂಡ ಐದಾರು ವರ್ಷ ಯಾರಿಗೂ ನೀಡಲಿಲ್ಲ. ನಂತರ ಪಂಕಜಳೆ ನನ್ನನ್ನ ಒಲಿಸಿ 'ಬಾ ವಾಸಂತಿ. ನೀನೇನೂ ಅವನ ಜೊತೆ ಬಾಳಬೇಕಿಲ್ಲ. ಅದಕ್ಕೇ ಅಂತ ಊರಲ್ಲದ ಊರಲ್ಲಿ ಕೂತು ಏನು ಮಾಡ್ತೀಯ ಬಾ...' ಅಂತ ಕರೆದಳು. ಮತ್ತೆ ಬಂದೆ ನನ್ನ ಹಳ್ಳಿಯ ಹತ್ತಿರ. ಆದರೆ ಹೊಸ ವಾಸಂತಿಯಾಗಿ.

ಯಾರಿಗೂ ಹೆದರದ ಬೆದರದ ವಾಸಂತಿಯಾಗಿ. ಹಾಗೂ ಹೀಗೂ ಏನೋ ಮಾತು ಕತೆ ಆಡಿ ಈ ವೇಳೆಗೆ ಸುಮತಿಯನ್ನು ಭಾವನಿಗೇ ಕಟ್ಟಿದ್ದರು. ಅವಳಿಗೂ ಅಂತಹ ಸಮಸ್ಯೆ ಅನ್ನಿಸಿರಲಿಲ್ಲ. ತೋಟ, ಗದ್ದೆ, ಆಳು, ಕಾಳು ಎಲ್ಲ ಇರುವಾಗ ಏನು ಕೊರತೆ. ಆದರೆ ಅವಳು ಮೊದಲೇ ಹೇಳಿದ್ದಳಂತೆ... 'ನಾನು ಅಕ್ಕನ ತರಹ ಅಡುಗೆ ಮನೆಗೆ ಅಂಟಿಕೊಳ್ಳಲ್ಲ' ಅಂತ. ಇವರಿಗೂ ಬೇಕಿತ್ತಲ್ಲ... ಮತ್ತೆ ನನ್ನ ತರಹ ಯಾರನ್ನು ಹುಡುಕುತ್ತಾರೆ! ಅಂತೂ ಅವಳಿಗೂ ಎರಡು ಮಕ್ಕಳಾದರು. ಇಬ್ಬರೂ ಗಂಡು ಹುಡುಗರು. ಅಡುಗೆಗೆ, ಮನೆ ಕೆಲಸಕ್ಕೆ ಆಳುಗಳು ಬಂದರು. ಇವಳು ರಾಣಿಯಂತೆ ಹಾಯಾಗಿರುವುದನ್ನು ಕಲಿತಳು.

ಆದರೆ ನಾನು ಮತ್ತೆ ಬರುವ ವೇಳೆಗೆ ಅಮ್ಮ ನನ್ನ ಕೊರಗಿನಲ್ಲೇ ಹಾಸಿಗೆ ಹಿಡಿದು ಹೋಗಿಬಿಟ್ಟಿದ್ದಳು. ನಮ್ಮ ಮನೆಯಲ್ಲಿ ಮೊದಲಿನಂತೆ ಬಂಧು ಬಾಂಧವರ್ಯಾರೂ ಇರಲಿಲ್ಲ. ತಮ್ಮಂದಿರು ವಿದೇಶದಲ್ಲಿ ನೆಲೆಗೊಂಡಿದ್ದರು. ಅಪ್ಪ ಮನೆ, ಆಸ್ತಿ ಮಾರಿ ತಮ್ಮಂದಿರ ಜೊತೆ ಹೋಗಿ ಸೇರಿಕೊಂಡರು. ಅಪ್ಪ ಹೇಳಿದ್ದರಂತೆ ಸುಮತಿ ಜೊತೆಯಲ್ಲಿ... 'ವಾಸಂತಿ ಏನಾದ್ರೂ ಕಂಡರೆ ಅವಳ ಪಾಲಿನ ಆಸ್ತಿ ಅವಳಿಗೆ